**ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ**
**ಕನ್ನಡ ವಿಶ್ವವಿದ್ಯಾಲಯ, ಹಂಪಿ**
**ವಿದ್ಯಾರಣ್ಯ-೫೮೩೨೭೬**

**ದಿನಾಂಕ: ೨೮.೦೪.೨೦೨೧**

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ, **ಬಂಜಾರ ಸಾಂಸ್ಕೃತಿಕ ಪದವಿವರಣಾ ಕೋಶ ಹಾಗೂ ಬಂಜಾರ-ಕನ್ನಡ ಭಾಷಾ ನಿಘಂಟು** ಯೋಜನೆಗೆ ಸಂಶೋಧನಾ ಸಹಾಯಕರ ೮(ಎಂಟು) ಹುದ್ದೆಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ದಿನಾಂಕ:೨೫.೦೫.೨೦೨೨ಕ್ಕೆ ಮೂಲ ದಾಖಲಾತಿಗಳೊಂದಿಗೆ ನೇರ ಸಂದರ್ಶನಕ್ಕೆ ಬೆಳಿಗ್ಗೆ ಸಮಯ: ೧೦:೩೦ಕ್ಕೆ ಕನ್ನಡ ವಿಶ್ವವಿದ್ಯಾಲಯದ ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರದಲ್ಲಿ ಹಾಜರಾಗತಕ್ಕದ್ದು.

**ಶೈಕ್ಷಣಿಕ ಅರ್ಹತೆ ಮತ್ತು ನಿಯಮಾವಳಿಗಳು**

೧. ಇದು ಅಲ್ಪಾವಧಿ ಯೋಜನೆ(ನಾಲ್ಕು ತಿಂಗಳು) ಆಗಿರುವುದರಿಂದ ನೇಮಕವೂ ತಾತ್ಕಾಲಿಕವಾಗಿರುತ್ತದೆ.

೨. ಅಭ್ಯರ್ಥಿಯು ಎಂ.ಎ. ಪಿಎಚ್.ಡಿ. ಪದವಿ ಪಡೆದಿರಬೇಕು.

೩. ಬಂಜಾರ ಭಾಷಾಭಿವೃದ್ಧಿಗೆ ಸಂಬಂಧಿಸಿದ ಯೋಜನೆಯಾಗಿರುವುದರಿಂದ ಲಂಬಾಣಿ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಆಳವಾದ ಜ್ಞಾನವಿರಬೇಕು, ಲಂಬಾಣಿ ಸಮುದಾಯದ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು.

೪. ಯೋಜನೆ ಕ್ಷೇತ್ರಕಾರ್ಯ ಆಧಾರಿತವಾಗಿರುವುದರಿಂದ ಅಭ್ಯರ್ಥಿಗಳಿಗೆ ಕ್ಷೇತ್ರಕಾರ್ಯದ ಅನುಭವವಿರಬೇಕು.

೫. ಕಂಪ್ಯೂಟರ್ ಜ್ಞಾನ ಹೊಂದಿರಬೇಕು, ಅಗತ್ಯ ದಾಖಲೆಯನ್ನು ಸಲ್ಲಿಸತಕ್ಕದ್ದು.

೬. ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಸಿಕ ರೂ. ೨೫೦೦೦=೦೦ಗಳನ್ನು ನಿಗದಿಪಡಿಸಲಾಗಿದೆ. (೨೦೦೦೦/- ಗೌರವಧನ+೫೦೦೦/- ಕ್ಷೇತ್ರಕಾರ್ಯಕ್ಕೆ)

೭. ಅಭ್ಯರ್ಥಿಯು ಕನ್ನಡ ವಿಶ್ವವಿದ್ಯಾಲಯ ಹಾಗೂ ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರದ ನಿಯಮಗಳಿಗೆ ಬದ್ಧರಾಗಿರಬೇಕು.

೮. ಯೋಜನೆಯಲ್ಲಿ ತಾತ್ಕಾಲಿಕವಾಗಿ ನೇಮಕಗೊಂಡ ಸಂಶೋಧನಾ ಸಹಾಯಕರ ಸೇವೆ ತೃಪ್ತಿಕರವಾಗಿಲ್ಲ ಎಂದು ಕಂಡುಬಂದಲ್ಲಿ ಅವರನ್ನು ಯಾವುದೇ ಮುನ್ಸೂಚನೆಯಿಲ್ಲದೆ ಸೇವೆಯಿಂದ ಕೈಬಿಡಲಾಗುತ್ತದೆ, ಈ ಅಧಿಕಾರ ವಿಶ್ವವಿದ್ಯಾಲಯ ಹಾಗೂ ಕೇಂದ್ರದ ನಿರ್ದೇಶಕರಿಗೆ ಇರುತ್ತದೆ.

೯. ಮೇಲ್ಕಂಡ ಯಾವುದೇ ನಿಯಮಗಳನ್ನು ಬದಲಾಯಿಸುವ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರ ವಿಶ್ವವಿದ್ಯಾಲಯಕ್ಕೆ ಇರುತ್ತದೆ.

೧೦. ಸಂಶೋಧನಾ ಸಹಾಯಕರಾಗಿ ನೇಮಕಗೊಂಡವರು ಇತರೆ ಯಾವುದೇ ಸಂಸ್ಥೆ ಅಥವಾ ಇನ್ನಿತರ ಯೋಜನೆಗಳಲ್ಲಿ ಕೆಲಸ ನಿರ್ವಹಿಸುತ್ತಿಲ್ಲವೆಂದು ಸ್ವಯಂ ದೃಢೀಕರಿಸಬೇಕು.

೧೧. ನೇಮಕಗೊಂಡ ತಾತ್ಕಾಲಿಕ ಸಂಶೋಧನಾ ಸಹಾಯಕರು ಈ ಮೇಲ್ಕಂಡ ನಿಯಮಗಳಿಗೆ ಬದ್ಧನಾಗಿರುತ್ತೇನೆಂದು ರೂ. ೧೦೦/- ಮೊತ್ತದ ಕರಾರು ಪತ್ರದಲ್ಲಿ ದೃಢೀಕರಿಸಿ ಸಲ್ಲಿಸಬೇಕು.

೧೨. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಭತ್ಯೆ ಇರುವುದಿಲ್ಲ.

(ನಿರ್ದೇಶಕರು)

ನಿರ್ದೇಶಕರು
ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿಜಯನಗರ ಜಿ॥ 583 276

Scanned with CamScanner

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ, ವಿದ್ಯಾರಣ್ಯ-೫೮೩೨೭೬**

ಸಂಖ್ಯೆ: ಕವಿಹಂ/ಬಂಭಾಅಕೇ/೨೦೨೨-೨೩. ದಿನಾಂಕ: ೨೮.೦೪.೨೦೨೨

# <u>ಪ್ರಕಟಣೆ</u>

ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ, ಬಂಜಾರ ಸಾಂಸ್ಕೃತಿಕ ಪದವಿವರಣಾ ಕೋಶ ಹಾಗೂ ಬಂಜಾರ-ಕನ್ನಡ ಭಾಷಾ ನಿಘಂಟು ಯೋಜನೆಗೆ ತಾತ್ಕಾಲಿಕ ಸಂಶೋಧನಾ ಸಹಾಯಕರ ೮ (ಎಂಟು) ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಅರ್ಹ ಅಭ್ಯರ್ಥಿಗಳು ದಿನಾಂಕ:೨೫.೦೫.೨೦೨೨ಕ್ಕೆ ಮೂಲ ದಾಖಲಾತಿಗಳೊಂದಿಗೆ ನೇರ ಸಂದರ್ಶನಕ್ಕೆ ಬೆಳಿಗ್ಗೆ ಸಮಯ: ೧೦:೩೦ಕ್ಕೆ ಕನ್ನಡ ವಿಶ್ವವಿದ್ಯಾಲಯದ ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರದಲ್ಲಿ ಹಾಜರಾಗತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ <u>www.kannadauniversity.org</u> ಅಥವಾ ದೂರವಾಣಿ ಸಂಖ್ಯೆ: **9972329842, 9591334651** ಯನ್ನು ಸಂಪರ್ಕಿಸಿ.

ಸಹಿ/- ನಿರ್ದೇಶಕರು,
ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ,
ಕನ್ನಡ ವಿಶ್ವವಿದ್ಯಾಲಯ,ಹಂಪಿ. ವಿಜಯನಗರ ಜಿಲ್ಲೆ:೫೮೩೨೭೬

ನಿರ್ದೇಶಕರು
ಬಂಜಾರ ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿಜಯನಗರ ಜಿ|| 583 276

Scanned with CamScanner